## ಓಎಸ್ ಸಂಖ್ಯೆಃ 59/2021 ಪಿಡಬ್ಲೂಃ1

## ದಿನಾಂಕಃ 12-01-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.

**ಪಾಟೀ ಸವಾಲುಃ 1 ಮತ್ತು 3 ನೇ ಪ್ರತಿವಾದಿಗಳ ಪರ ವಕೀಲರಿಂದ**

ಪ್ರತಿವಾದಿ 4 ರಿಂದ 8 ಇವರು ದಾವಾ ಆಸ್ತಿಗಳಲ್ಲಿ ಬಾಡಿಗೆ ಇರುವುದರಿಂದ ಅವರನ್ನು ಪಕ್ಷಗಾರರನ್ನಾಗಿ ತೋರಿಸಲಾಗಿದೆ. ಪ್ರತಿವಾದಿ ನಂಬ್ರ 4 ಈತ ದಾವಾ ತಪಶೀಲು ಆಸ್ತಿ ನಂಬ್ರ 877 ಅ/1 ನೇದ್ದರಲ್ಲಿ ಬಾಡಿಗೆ ಇದ್ದಾನೆ ಎಂದರೆ ನಿಜ. ಅದರಲ್ಲಿ ಒಟ್ಟು 2 ಮಳಿಗೆ ಇವೆ ಎಂದರೆ ನಿಜ. ಒಂದು ನಿವೇದಿತ ಬಟ್ಟೆ ಅಂಗಡಿ ಇದ್ದು ಅದರ ಬಾಡಿಗೆಯನ್ನು 2 ನೇ ಪ್ರತಿವಾದಿ ಪಡೆಯುತ್ತಾನೆ ಎಂದರೆ ನಿಜ. ಮತ್ತೊಂದು ಮಳಿಗೆಯಲ್ಲಿ ನಿವೇದಿತ ಮೆಡಿಕಲ್ ಸ್ಟೋರ್ಸ ಮತ್ತು ಮೊಬೈಲ್ ಅಂಗಡಿ ಇದೆ ಎಂದರೆ ಅದರ ಬಾಡಿಗೆಯನ್ನು 2 ನೇ ಪ್ರತಿವಾದಿ ಪಡೆಯುತ್ತಾನೆ. ಅದೇ ರೀತಿ 5 ನೇ ಪ್ರತಿವಾದಿ ರೈತಬಾಂಧವ ಎಂಬ ಹೊಟೇಲ್‌ಗೆ ಬಾಡಿಗೆದಾರನಿರುತ್ತಾನೆ ಎಂದರೆ ನಿಜ. ಸದ್ರಿ ಬಾಡಿಗೆಯನ್ನು 3 ನೇ ಪ್ರತಿವಾದಿ ಪಡೆಯುತ್ತಾನೆ.

7 ನೇ ಪ್ರತಿವಾದಿ ಈತನಿಗೆ ನನ್ನ ತಂದೆ ಆತ ಸೇವೆ ಮಾಡಿದ ಕಾರಣ ಯಾವುದೇ ಬಾಡಿಗೆ ಪಡೆಯದಲೇ ಪುಕ್ಕಟೆಯಾಗಿ ಆತನಿಗೆ ಕೊಡಲಾಗಿದೆ ಎಂದರೆ ಸರಿ ಅಲ್ಲ. ಸಾಕ್ಷಿ ಮುಂದುವರಿದು 3 ನೇ ಪ್ರತಿವಾದಿ ಆ ಬಾಡಿಗೆ ಪಡೆಯುತ್ತಾನೆ ಎಂದು ಹೇಳುತ್ತಾರೆ. ಸದ್ರಿ ಅದರ ಆಸ್ತಿ ಸಂಖ್ಯೆ ಹೇಳಲು ಬರುವುದಿಲ್ಲ. ಆ ಆಸ್ತಿ ಸಂಖ್ಯೆ 877 ಅ/2 ಅದರ ಮೇಲೆ ಯಾವುದೇ ಬಾಡಿಗೆ ತೆಗೆದುಕೊಳ್ಳುವುದಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. 6 ನೇ ಪ್ರತಿವಾದಿ ಕಡೆಯಿಂದ 3 ನೇ ಪ್ರತಿವಾದಿ ಅಕ್ಷಯ ಮತ್ತು ಚಂದನ ಪರವಾಗಿ ಪಡೆಯುತ್ತಾನೆ ಎಂದರೆ ನಿಜ ಆದರೆ ಯಾವುದೇ ಮೃತ್ಯುಪತ್ರ ಆಗಿರುವುದಿಲ್ಲ ಎಂದು ಹೇಳುತ್ತಾರೆ.

ನಮ್ಮ ಗರಾಣೆಯಲ್ಲಿ ಎಷ್ಟು ಮೃತ್ಯುಪತ್ರಗಳಾಗಿವೆ ಎಂದು ನನಗೆ ಗೊತ್ತಿಲ್ಲ. ಅನುಸೂಚಿ ನಂಬ್ರ 877 ಅ/4 ನೇದ್ದರಲ್ಲಿ ನಾನು ವಾಸವಾಗಿದ್ದೇನೆ ಎಂದರೆ ನಿಜ. ಅಲ್ಲಿ ನಾನು ಖಾನಾವಳಿಗೆ ಬಾಡಿಗೆ ಕೊಟ್ಟಿದ್ದೇನೆ ಎಂದರೆ ಸರಿ ಅಲ್ಲ. ಸದ್ರಿ ನನ್ನ ಪ್ರಮಾಣ ಪತ್ರದಲ್ಲಿ ಎಲ್ಲ ಆಸ್ತಿ ಬಾಡಿಗೆಯನ್ನು 3 ನೇ ಪ್ರತಿವಾದಿ ಪಡೆಯುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ದಾವಾದಲ್ಲಿ ಹಲಗೇರಿ ಗ್ರಾಮ ಮತ್ತು ಆಲದಕಟ್ಟಿ ಗ್ರಾಮಗಳ ಆಸ್ತಿಯನ್ನು ತೋರಿಸಿರುತ್ತೇವೆ ಎಂದರೆ ನಿಜ. ಸದ್ರಿ ಆಲದಕಟ್ಟಿ ಜಮೀನಿನಲ್ಲಿ ಒಟ್ಟು ಕ್ಷೇತ್ರ 8 ಎಕರೆ ಜಮೀನಿನಲ್ಲಿ ಎಷ್ಟು ಜಮೀನು ನಿನ್ನ ಪಾಲಿಗೆ ಬಂದಿದೆ ಎಂಬ

ಸಲಹೆಗೆ ಯಾವುದೇ ಆಸ್ತಿ ವಿಭಾಗ ಆಗಿಲ್ಲ ಬಂದಿರುವ ಪ್ರಶ್ನೆ ಇಲ್ಲ ಎಂದು ಹೇಳುತ್ತಾರೆ. ಸದ್ರಿ ಆಲದಕಟ್ಟಿ ಗ್ರಾಮದ ಸರ್ವೆ ನಂಬ್ರ 111/1 ಅ+2 ಅ ಕ್ಷೇತ್ರ 8 ಎಕರೆ 12 ಗುಂಟೆ ಈ ಜಮೀನನ್ನು ತನ್ನ ಮಕ್ಕಳಿಗೆ ದಿನಾಂಕ 11-11-2011 ರಂದು ನೋಂದಾಯಿತ ಮೃತ್ಯುಪತ್ರದ ಪ್ರಕಾರ ಎಲ್ಲ ಮಕ್ಕಳಿಗೆ ಹಿಸ್ಸೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ ಅಲ್ಲ. ಸದ್ರಿ ಮೃತ್ಯುಪತ್ರ ಮಾಡಿಸಲು ನಾನೇ ಹೋಗಿದ್ದೆ ನಾನೇ ಮುಂದೆ ನಿಂತು ಮಾಡಿಸಿರುತ್ತೇನೆ ಎಂದರೆ ಸರಿ ಅಲ್ಲ. ಒಟ್ಟು 3 ಮೃತ್ಯುಪತ್ರಗಳು ನಮ್ಮ ಮನೆಯಲ್ಲಿ ತಯಾರಿಸಲಾಗಿದೆ ಎಂದರೆ ಸರಿ ಅಲ್ಲ.

ದಿನಾಂಕ 31-01-2013 ರಂದು ಶ್ರೀಮತಿ ಪ್ರೇಮಾ ಕೋಂ.ಜಯರುದ್ರಪ್ಪ ಬೆಲ್ಲದ 1 ನೇ ಪ್ರತಿವಾದಿಯ ಹೆಂಡತಿ ಹೆಸರಿಗೆ ವಿಪಿಸಿ ನಂಬ್ರ 877 ಅ/3 ಕ್ಷೇತ್ರ 15*15 ನೇದ್ದರಲ್ಲಿ ಆರ್.ಸಿಸಿ ಕಟ್ಟಡ ಇದ್ದು ಅದರಲ್ಲಿ ಮೊಬೈಲ್ ಶಾಪ್ ಇದ್ದು ಅದನ್ನು ಮೃತ್ಯುಪತ್ರದ ಮೂಲಕ ಬರೆದು ಕೊಡಲಾಗಿದೆ ಎಂದರೆ ಸರಿ ಅಲ್ಲ.

ಈ ಹಂತದಲ್ಲಿ ಮದ್ಯಾಹ್ನದ ಊಟದ ಸಮಯ ಆಗಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

**ಪ್ರಭಾರ 3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,**
**ಮತ್ತು ಜೆಎಂಎಫ್‌ಸಿ, ರಾಣೇಬೆನ್ನೂರು.**

**ಓಎಸ್ ಸಂಖ್ಯೆ: 59/2021 ಪಿಡಬ್ಲೂ:1**

ಊಟದ ವಿರಾಮದ ನಂತರ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರಿದ ಪಾಟೀ ಸವಾಲು: 1 ಮತ್ತು 3 ನೇ ಪ್ರತಿವಾದಿಗಳ ಪರ ವಕೀಲರಿಂದ**

ದಿನಾಂಕ 01-07-2013 ರಂದು ನನ್ನ ತಂದೆ 3 ನೇ ಪ್ರತಿವಾದಿ ಮಕ್ಕಳಾದ ಅಕ್ಷಯ, ಚಂದನ ಹಲಗೇರಿ ವಿಪಿಸಿ ನಂಬ್ರ 877 ಅ/5 ಅದರಲ್ಲಿ ಗೊಬ್ಬರದ ಅಂಗಡಿ ಇದ್ದದ್ದನ್ನು ನನ್ನ ಮನೆಯಲ್ಲಿ ಬರೆದು ನಂತರ ನನ್ನ ಮೂಲಕವೇ ನೋಂದಣಿ ಮಾಡಲಾಗಿದೆ ಎಂದರೆ

ಸರಿ ಅಲ್ಲ. ಸದ್ರಿ ಆಲದಕಟ್ಟಿ ಗ್ರಾಮದ 111/2 1ಅ ಇದರಲ್ಲಿ 2 ಎಕರೆ ನನ್ನ ಪಾಲಿಗೆ ಬಂದಿದೆ ಎಂದರೆ ಸರಿ ಅಲ್ಲ. ಅದರಲ್ಲಿ ಎಂಆರ್.ಚ್ 40/2021 ರ ಮೃತ್ಯು ಪತ್ರದ ಆಧಾರದ ಮೇರೆಗೆ ನಮ್ಮ ಎಲ್ಲ ಹೆಸರುಗಳು ದಾಖಲಾಗಿವೆ ಎಂದರೆ ಸರಿ ಅಲ್ಲ. ಆ ಪ್ರಕಾರ ಈಗ ನನಗೆ ತೋರಿಸಲಾದ ಪಹಣಿ ಪತ್ರಿಕೆಯಲ್ಲಿ ಎಲ್ಲರ ಹೆಸರು ದಾಖಲಾಗಿವೆ ಎಂದರೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಾನು ಈ ದಾವೆಯನ್ನು 6 ಮಳಿಗೆ ಪೈಕಿ 1 ಮಳಿಗೆ ಬೇಕು ಎಂದು ಸಲ್ಲಿಸಿರುತ್ತೇನೆ. ಸದ್ರಿ ಉಳಿದ ಆಸ್ತಿಗಳಲ್ಲಿ ನನ್ನ ಬೇಡಿಕೆ ಇಲ್ಲ 6 ಮಳಿಗೆ ಪೈಕಿ 1 ಮಳಿಗೆ ಬೇಕು ಎಂದು ಕೇಳುತ್ತಿದ್ದೇನೆ.

ಸದ್ರಿ ಉಳಿದ ಆಸ್ತಿಗಳಲ್ಲಿಯೂ ನನಗೆ ಭಾಗ ಬೇಕು ಎಂದು ಕೇಳುತ್ತಿದ್ದೇನೆ ಎಂದು ಹೇಳುತ್ತಾರೆ. 1 ಮಳಿಗೆ ಬೇಕು ಎಂದು ನಾನು ಸುಳ್ಳು ಹೇಳಿಲ್ಲ. ನಾನು ಈಗಾಗಲೇ ಹೇಳಿಲ್ಲ ಎಂದು ಹೇಳುತ್ತಾರೆ. 2ನೇ ಪ್ರತಿವಾದಿ ನನಗೆ ದೊಡ್ಡಣ್ಣ ಆಗಬೇಕು. ಆಲದಕಟ್ಟಿ ಗ್ರಾಮದ ಸರ್ವೆ ನಂಬ್ರ 111/2 ಉತ್ತರ ದಿಕ್ಕಿನ 2 ಎಕರೆ 2 ಗುಂಟೆ ಜಮೀನನ್ನು ಈಗಲೂ ಸಹ ನಾನೇ ಉಳುಮೆ ಮಾಡುತ್ತಿದ್ದೇನೆ ಎಂದರೆ ಸರಿ ಅಲ್ಲ. ಅದೇ ಸರ್ವೆ ನಂಬರಿನಲ್ಲಿ ನನ್ನ ಸಹೋದರ ಬಸವರಾಜಪ್ಪನಿಗೆ 2 ಎಕರೆ 2 ಗುಂಟೆ ಜಮೀನು ಉಳುಮೆ ಮಾಡುತ್ತಿದ್ದಾನೆ ಎಂದರೆ ಸರಿ ಅಲ್ಲ. ಪ್ರತಿವಾದಿ 3 ಈತನಿಗೆ 2 ಎಕರೆ 3 ಗುಂಟೆ ದಕ್ಷಿಣ ಭಾಗಕ್ಕೆ ಹೋಗಿದೆ ಎಂದರೆ ನಿಜ ಆತನೇ ಸಾಗುವಳಿ ಮಾಡುತ್ತಿದ್ದಾನೆ. ಅದೇ ರೀತಿ ಜಯರುದ್ರಪ್ಪ ಆತನ ಪಾಲಿಗೆ ಬಂದ ಜಮೀನನ್ನು ಬೇರೆಯವರ ಕಡೆ ಮಾಡಿಸುತ್ತಿದ್ದಾನೆ ಎಂದರೆ ನಿಜ. ಪ್ರತಿವಾದಿ 12, 13 ಇವರಿಗೆ ಇದೇ ಜಮೀನಿನಲ್ಲಿ ಉತ್ತರ ಭಾಗಕ್ಕೆ 2 ಎಕರೆ 2 ಗುಂಟೆ ಹೋಗಿದೆ ಎಂದರೆ ನಿಜ ನನ್ನ ತಮ್ಮ ಅಂದರೆ 3ನೇ ಪ್ರತಿವಾದಿ ಸಾಗುವಳಿ ಮಾಡುತ್ತಾನೆ. ಸದ್ರಿ ಆ ಜಮೀನನ್ನು ಹಸನಸಾಬ್ ಮೂಲಕ ಪ್ರತಿವಾದಿ 12, 13 ಇವರು ಉಳುಮೆ ಮಾಡುತ್ತಾರೆ ಎಂದರೆ ಸರಿ ಅಲ್ಲ. ಸದ್ರಿ ವಿಭಾಗದಲ್ಲಿ ವಿಪಿಸಿ ಆಸ್ತಿಗಳನ್ನೆಲ್ಲ ನನ್ನ ತಂದೆ ಹಿಸ್ಸೆಗೆ ಇಡಲಾಗಿತ್ತು ಎಂದರೆ ಸರಿ ಅಲ್ಲ.

ನನ್ನ ತಂದೆ ಆಲದಕಟ್ಟಿ ಜಮೀನು ಸರ್ವೆ ನಂಬ್ರ 111/2 3 ಎಕರೆ ಜಮೀನನ್ನು ನನ್ನ ತಂದೆ ಸ್ವತಃ ಖರೀದಿ ಮಾಡಿ ಅದನ್ನು ಪ್ರತಿವಾದಿ 2 ಈತನಿಗೆ ಕೊಟ್ಟಿರುತ್ತಾರೆ ಎಂದರೆ ಸರಿ ಅಲ್ಲ ಆತ ಅದನ್ನು ಸ್ವಂತ ಖರೀದಿಸಿರುತ್ತಾನೆ. ಸದ್ರಿ ನನ್ನ ತಂದೆ ಆಲದಕಟ್ಟಿ ಮತ್ತೊಂದು ಜಮೀನಿನಲ್ಲಿ ಅಂದರೆ 8 ಎಕರೆ 9 ಗುಂಟೆಯಲ್ಲಿ ಆತನಿಗೆ ಹಿಸ್ಸೆ ಕೊಡದ ಕಾರಣಕ್ಕಾಗಿ ಆ ಜಮೀನನ್ನು ಆತನಿಗೆ ಖರೀದಿ ಮಾಡಿಸಿ ಕೊಟ್ಟಿರುತ್ತಾರೆ ಎಂದರೆ ಸರಿ ಅಲ್ಲ. ಆ ಜಮೀನಿನಲ್ಲಿ ಒಂದು ಕೊಳವೆ ಬಾವಿ ಇದೆ ಎಂದರೆ ನಿಜ. ಸದ್ರಿ ಕೊಳವೆ ಬಾವಿಯಲ್ಲಿ

ಎಲ್ಲರಿಗೂ ಸಾಮೂಹಿಕ ಹಿಸ್ಸೆ ಇದೆ ಎಂದರೆ ನಿಜ. ಕೊಳವೆ ಬಾವಿಯ ಸುತ್ತಮುತ್ತ ಇರುವ ಮರಗಳಿಗೆ ಸಾಮೂಹಿಕ ಹಿಸ್ಸೆ ಇದೆ ಎಂದರೆ ನಿಜ.

ಸದ್ರಿ ನನ್ನ ತಂದೆ 3 ನೋಂದಾಯಿತ ಮೃತ್ಯುಪತ್ರಗಳ ಮೂಲಕ ಮತ್ತು ಅಫಸಾತ್ ವಾಟ್ನಿಗಳ ಪ್ರಕಾರ ನನ್ನ ಸಹೋದರರಿಗೆ ಎಲ್ಲರಿಗೂ ವಿಭಾಗ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ ಅಲ್ಲ. ನನ್ನ ತಂದೆಯ ಮೇಲೆ ನನಗೆ ಹೆಚ್ಚಿನ ಗೌರವ ಇದೆ. ನಮ್ಮ 3 ಜನ ಸಹೋದರರಿಯರು ಇರುತ್ತಾರೆ. ಒಬ್ಬರು ಮೈಸೂರು, ಬೆಂಗಳೂರು ಹೂವಿನ ಹಡಗಲಿಯಲ್ಲಿ ವಾಸವಾಗಿರುತ್ತಾರೆ. ನನ್ನ ತಂದೆ ತಾಯಿಗೆ 4 ಜನ ಗಂಡು ಮಕ್ಕಳು 3 ಜನ ಹೆಣ್ಣು ಮಕ್ಕಳು ಜನಿಸಿದ್ದು ಅವರೆಲ್ಲರನ್ನೂ ಸಮಾನವಾಗಿ ನೋಡುತ್ತಿದ್ದರು ಎಂದರೆ ನಿಜ.

ವಿಪಿಸಿ ನಂಬ್ರ 368, 369 ಎಲ್ಲಿದೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ತಾಯಿ ಯಾವ ಆಸ್ತಿಯಲ್ಲಿ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ವಿಪಿಸಿ ನಂಬ್ರ 369 ನ ನನ್ನ ಸ್ವಾಧೀನದಲ್ಲಿದೆ ಎಂದರೆ ಸರಿ ಅಲ್ಲ. ಅದು ನನ್ನ ಹೆಸರಿನಲ್ಲಿದ್ದು ಆದರೆ ಅದನ್ನು 2ನೇ ಪ್ರತಿವಾದಿ ಉಪಯೋಗಿಸುತ್ತಿದ್ದಾನೆ ಎಂದರೆ ನಿಜ. ನಾನು ವಾಸವಾಗಿದ್ದ ಮನೆಯಲ್ಲಿ ಖಾನಾವಳಿ ಇತ್ತು ಎಂದರೆ ಸರಿ ಅಲ್ಲ. ನಾನು ವಾಸವಾಗಿರುವ ಮನೆಯನ್ನು ದಾವೆಯಲ್ಲಿ ಸೇರ್ಪಡೆ ಮಾಡಿಲ್ಲ ಎಂದರೆ ನಿಜ. ಅದೇ ರೀತಿ ಪ್ರತಿವಾದಿ ನಂಬ್ರ ಆಲದಕಟ್ಟಿಯ 3 ಎಕರೆ ಜಮೀನನ್ನು ಸೇರಿಸಿಲ್ಲ ಎಂದರೆ ನಿಜ. ಸದ್ರಿ ದಾವಾ ಆಸ್ತಿಗಳು ಮತ್ತು ನಾನು ವಾಸವಿದ್ದ ಮನೆ ಹಾಗೂ 2ನೇ ಪ್ರತಿವಾದಿ ಹೆಸರಿನಲ್ಲಿರುವ ಆಸ್ತಿಗಳು ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿ ಅಲ್ಲ.

ಸದ್ರಿ ನೋಂದಾಯಿತ ಮೃತ್ಯುಪತ್ರಗಳು ನನಗೆ ಸಂಪೂರ್ಣ ಮಾಹಿತಿ ಇದ್ದು ಅವುಗಳನ್ನು ನಾನೇ ಮುಂದೆ ನಿಂತು ಮಾಡಿಸಿರುತ್ತೇನೆ ಎಂದರೆ ಸರಿ ಅಲ್ಲ. ಎಲ್ಲಾ ಮೃತ್ಯುಪತ್ರಗಳ ಮೇಲೆ ಎಲ್ಲರೂ ಅನುಭವಿಸಿದ್ದು ಮತ್ತು ಜಾರಿ ರೂಪದಲ್ಲಿ ಬಂದಿವೆ ಎಂದರೆ ಸರಿ ಅಲ್ಲ. ಸರ್ವೆ ನಂಬರ 111/2 8 ಎಕರೆ 11 ಗುಂಟೆಯಲ್ಲಿ ನನಗೂ ಕೂಡ ಹಿಸ್ಸೆ ಇದೆ. ಸದ್ರಿ 2011 ರಿಂದ ಇಲ್ಲಿಯವರೆಗೆ ಆ ಸರ್ವೆ ನಂಬರ್ ಗೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ನಾನು ನೋಡಿಲ್ಲ. ತಿದ್ದುಪಡಿ ಮಾಡುವ ಸಮಯದಲ್ಲಿ ಆ ಆಸ್ತಿಯ ಬಗ್ಗೆ ಪಹಣಿ ಪತ್ರಿಕೆ ನೋಡಿರುತ್ತೇನೆ. ಅದರಲ್ಲಿ ನನ್ನ ಹೆಸರು ಜಂಟಿಯಾಗಿದೆ ಎಂದರೆ ನಿಜ. ನನ್ನ ತಂದೆ ಮಾಡಿಕೊಟ್ಟ ಎಂದು ಹೇಳುವ ಮರಣ ಶಾಸನ ಪತ್ರಗಳನ್ನು ಇಲ್ಲಿಯವರೆಗೆ ನಾನು ಪ್ರಶ್ನೆ ಮಾಡಿಲ್ಲ.

ವಿಪಿಸಿ ನಂಬ್ರ 877 ಅ/6 ಅದು ನನ್ನ ಸ್ವಾಧೀನದಲ್ಲಿದೆ ಎಂದರೆ ಸರಿ ಅಲ್ಲ. ಸದ್ರಿ ಆ ಆಸ್ತಿಯನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ನಿಜ. ವಿಪಿಸಿ ನಂಬರ 368 ರಲ್ಲಿ 3 ನೇ ಪ್ರತಿವಾದಿ ವಾಸವಾಗಿದ್ದಾನೆ ಎಂದರೆ ನಿಜ. ಸಾಕ್ಷಿ ಮುಂದುವರಿದು ಅದರಲ್ಲಿ ಕೂಡ ಭಾಗಹ ಆಗಬೇಕು ಎಂದು ಹೇಳುತ್ತಾರೆ. ಸದ್ರಿ 3 ನೇ ಪ್ರತಿವಾದಿ ಮತ್ತು ಆತನ ಹೆಂಡತಿ ಗೀತಾ ವಾಸವಿರುವ ಮನೆಯಲ್ಲೇ ನನ್ನ ತಂದೆ ತಾಯಿ ತೀರಿಕೊಂಡಿರುತ್ತಾರೆ ಎಂದರೆ ನಿಜ. ನನ್ನ ತಂದೆಯ 94 ನೇ ವರ್ಷದ ಜನ್ಮದಿನ ಮಾಡಿದ್ದು ಅದು ನನಗೆ ಗೊತ್ತಿಲ್ಲ. ನಾನು ಆ ಕಾರ್ಯಕ್ರಮಕ್ಕೆ ಹೋಗಿಲ್ಲ ನನಗೆ ಗೊತ್ತಿಲ್ಲ. ಆ ಕಾರ್ಯಕ್ರಮದ ಖರ್ಚನ್ನು 3 ನೇ ಪ್ರತಿವಾದಿ ಹೆಂಡತಿ ಗೀತ ಮತ್ತು ಪ್ರತಿವಾದಿ 9 ರಿಂದ 11 ಇವರು ಖರ್ಚು ಭರಾಯಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ವಿಪಿಸಿ ನಂಬ್ರ 368 ಕ್ಕೆ ತಾಗಿ ವಿಪಿಸಿ 369 ಇದೆ ಎಂದರೆ ನಿಜ. ಪ್ರಕಾಶ ಇಂಜಿನಿಯರ್ ಎನ್ನುವವರ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಾಯಿಯ ತಂಗಿ ಶಿವಮ್ಮ. ಶಿವಮ್ಮನಿಗೆ ಎಷ್ಟು ಜನ ಮಕ್ಕಳು ಇದ್ದರು ಎಂದು ನನಗೆ ಗೊತ್ತಿಲ್ಲ. ಪ್ರಕಾಶನ ತಾಯಿ ಮತ್ತು ನನ್ನ ತಾಯಿ ಖಾಸ ಅಕ್ಕ ತಂಗಿಯರು ಎಂದರೆ ನಿಜ. ಪ್ರಕಾಶ ಆತ ನನಗೆ ತಮ್ಮನಾಗಬೇಕು. ಪ್ರಕಾಶನದು ಬಿಳಿಚೋಡ ಹಳ್ಳಿ ಜಗಳೂರು ತಾಲೂಕು ಎಂದರೆ ನನಗೆ ಗೊತ್ತಿಲ್ಲ. ಸದ್ರಿ ನಮ್ಮ ಎಲ್ಲ 4 ಜನರ ಜಮೀನನ್ನು ಪ್ರಕಾಶನೇ ಸಾಗುವಳಿ ಮಾಡುತ್ತಾರೆ ಎಂದರೆ ನಿಜ. ಸದ್ರಿ ಬಿಳಿಚೋಡ ಗ್ರಾಮದಲ್ಲಿ ನಾವೆಲ್ಲರೂ ಸೇರಿ ರಾಜಿ ಮಾಡಿಕೊಂಡಿದ್ದು ಅಲ್ಲಿ ಪ್ರಕಾಶ ಈತನು ನಮ್ಮ ಎಲ್ಲರನ್ನೂ ಕರೆಸಿ ದಾವೆಯನ್ನು ಹಿಂದಕ್ಕೆ ತೆಗೆದುಕೊಳ್ಳಿ ಎಂದು ಹೇಳಿದಾಗ ಒಪ್ಪಿಕೊಂಡಿದ್ದು ಈಗ ಇಲ್ಲ ಎಂದು ಹೇಳುತ್ತಿದ್ದೇನೆ ಎಂಬ ಸಲಹೆಯನ್ನು ನ್ಯಾಯಾಲಯದ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದ್ದು ಅದರ ಮೇಲೆ ಆದೇಶ ಮಾಡಲು ಕೇಳಿಕೊಂಡಿದ್ದು ಇದೆ. ಸದ್ರಿ ರಾಜಿ ಸಂಧಾನದಲ್ಲಿ ಆದ ಮಾತುಕತೆಗಳ ಬಗ್ಗೆ ಪಾಟೀ ಸವಾಲು ಮಾಡುವುದು ಮತ್ತು ಅಲ್ಲಿ ಇತ್ಯರ್ಥ ಆದ ವಿಷಯಗಳನ್ನು ಪ್ರಶ್ನೆ ಮಾಡಲು ಬರುವುದಿಲ್ಲ ಎಂದು ಗೌರವಾನ್ವಿತ ಉಚ್ಚ ನ್ಯಾಯಾಲಯದ ನೊಟಿಫಿಕೇಶನ್ ಇರುವುದರಿಂದ ಸದ್ರಿ ಆ ಕುರಿತು ಕೇಳಲು ನಿರ್ಬಂಧ ಹೇರಲಾಗಿದೆ.

ಸದ್ರಿ ಈ ಪ್ರಕರಣ ರಾಜಿಗಾಗಿ ಲೋಕ ಅದಾಲತ್ ಗೆ 3 – 4 ಬಾರಿ ಹೋಗಿದ್ದು ಅಲ್ಲಿ ಆದ ಚರ್ಚೆಗಳ ಬಗ್ಗೆ ಕೂಡ ವಕೀಲರು ಪಾಟೀ ಸವಾಲು ಮಾಡಲು ಮುಂದಾಗಿದ್ದು ಅದನ್ನು ಕೂಡ ಮಾಡುವಂತಿಲ್ಲ ಎಂದು ನ್ಯಾಯಾಲಯ ಹೇಳಿದ್ದು ಸದ್ರಿ ಅದಕ್ಕೆ ಕೂಡ ಪ್ರತ್ಯೇಕ ಆದೇಶ ಆಗಲಿ ಎಂದು ಒತ್ತಾಯಿಸಿದ್ದರಿಂದ ಸದ್ರಿ ಈ ರೀತಿಯಾಗಿ ಆದೇಶಿಸಲಾಗಿದೆ.

ಲೋಕ ಅದಾಲತನಲ್ಲಿ ಆದ ಚರ್ಚೆಗಳು ಮಧ್ಯಂತರನೇದ್ದರಲ್ಲಿ ಆದ ಆದೇಶದ ಬಗ್ಗೆ ಪ್ರಶ್ನೆ ಮಾಡಕೂಡದು ಎಂದು ನ್ಯಾಯಾಲಯ ಪುನರುಚ್ಚರಿಸುತ್ತ ಆದೇಶ ಮಾಡಿದೆ.

ಪ್ರತಿವಾದಿ ನಂಬ್ರ 9 ರಿಂದ 11 ಇವರಿಗೆ ಗರಾಣೆ ಬದಲು ಅವರಿಗೆ ಕೊಡಬೇಕಾದ ಹಿಸ್ಸೆಯನ್ನು ಮದುವೆ ಸಮಯಕ್ಕೆ ಬೆಳ್ಳಿ ಬಂಗಾರದ ಮೂಲಕ ಕೊಡಲಾಗಿದೆ ಎಂದರೆ ನಿಜ. ಸದ್ರಿ ಈಗ 4 ಹಿಸ್ಸೆಗಳು ಮಾತ್ರ ಆಗಬೇಕು ಎಂದರೆ ನಿಜ. ನನ್ನ ತಂದೆ ತಾಯಿ ಜೀವಿತ ಇದ್ದಾಗ 2007 ರಲ್ಲಿ ಅಫಸಾತ್ ವಾಟ್ನಿಯಾಗಿದೆ ಎಂದರೆ ಸರಿ ಅಲ್ಲ. ಇದಾದ ನಂತರ 3 ಮೃತ್ಯು ಪತ್ರಗಳು ಆದ ನಂತರ ಮತ್ತೊಂದು ಬಾರಿ ಅಫಸಾತ್ ವಾಟ್ನಿಯಾಗಿದೆ ಎಂದರೆ ಸರಿ ಅಲ್ಲ. ಹೆಣ್ಣು ಮಕ್ಕಳಿಗೆ ಹಿಸ್ಸೆ ಕೊಟ್ಟಾಗ ಮತ್ತೊಂದು ಬಾರಿ ವಾಟ್ನಿಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಂತರ ನನ್ನ ತಾಯಿ ಹಿಸ್ಸೆಗೆ ಬರತಕ್ಕ ಪಾಲಿನಲ್ಲಿ ಜಗಳೂರು ಗ್ರಾಮದಲ್ಲಿ ಮತ್ತೊಂದು ಬಾರಿಗೆ ಅಫಸಾತ್ ವಾಟ್ನಿಯಾಗಿದೆ ಎಂದರೆ ಸರಿ ಅಲ್ಲ.

ಸದ್ರಿ ಎಲ್ಲ ಆಸ್ತಿಗಳು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಗಳಿದ್ದು ಆ ಎಲ್ಲ ಆಸ್ತಿಗಳಲ್ಲಿ ನಾವು ಅಣ್ಣ ತಮ್ಮಂದಿರಿಗೆ ವಿಭಾಗ ಮಾಡಿ ಕೊಟ್ಟದ್ದು ಆ ಪ್ರಕಾರ ನಾವು ಸ್ವಾಧೀನದಲ್ಲಿದ್ದು ಉಪಭೋಗ ಮಾಡುತ್ತ ಬಂದಿರುತ್ತೇವೆ ಎಂದರೆ ಸರಿ ಅಲ್ಲ. ಸದ್ರಿ ನನ್ನ ಹತ್ತಿರ ಬರತಕ್ಕಂತಹ ಮಳಿಗೆಗಳಲ್ಲಿ ಒಂದು ಮಳಿಗೆ ಕೊಟ್ಟಲ್ಲಿ ನಾನು ರಾಜಿ ಮಾಡಿಕೊಳ್ಳುತ್ತೇನೆ ಅದೇ ಕಾರಣಕ್ಕಾಗಿ ಈ ದಾವೆ ಸಲ್ಲಿಸಲಾಗಿದೆ ಎಂದರೆ ಸರಿ ಅಲ್ಲ. ಸದ್ರಿ ಎಲ್ಲ ಆಸ್ತಿಗಳಲ್ಲಿ ಹಿಸ್ಸೆಗಳು ಆಗಿದ್ದು ನನ್ನ ತಂದೆ ವೈರತ್ವ ಇರುವವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಸದ್ರಿ ನಾನು ನ್ಯಾಯಾಲಯಕ್ಕೆ ಬಂದು ನಮ್ಮ ಮನೆತನದ ಗೌರವ ಹಾಳು ಮಾಡಿರುತ್ತೇನೆ ಎಂದರೆ ಸರಿ ಅಲ್ಲ.

**ಪಾಟೀ ಸವಾಲುಃ**

ಪ್ರತಿವಾದಿ ನಂಬ್ರ 10, 11 ರವರ ಪರ ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

**ಪ್ರಭಾರ 3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,**
**ಮತ್ತು ಜೆಎಂಎಫ್‌ಸಿ, ರಾಣೇಬೆನ್ನೂರು.**